## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಶಿವಮೊಗ್ಗ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಕ್ಕೆ 2014-15ನೇ ಸಾಲಿನ 2ನೇ ತ್ರೈಮಾಸಿಕ ಯೋಜನಾ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ:-** 1) ಸರ್ಕಾರಿ ಆದೇಶ ಸಂಖ್ಯೆ: ಕೃಇ 09 ಕೃವಿಶಿ 2014 ದಿನಾಂಕ 14-05-2014.

2) ಹಣಕಾಸು ನಿಯಂತ್ರಣಾಧಿಕಾರಿಗಳು, ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ, ಇವರ ದಿನಾಂಕ 05-07-2014ರ ಪತ್ರಸಂಖ್ಯೆ: ಹನಿಅ /ಕೃತೋವಿವಿಶಿ/274(ಎ)/2014-15.

**ಪ್ರಸ್ತಾವನೆ:-**

ಶಿವಮೊಗ್ಗ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ ಯೋಜನೆ ಉದ್ದೇಶಗಳಿಗಾಗಿ 2014-15ನೇ ಸಾಲಿನ ಆಯವ್ಯಯದಲ್ಲಿ ರಾಜ್ಯ ಸರ್ಕಾರವು ಸಹಾಯಾನುದಾನ-ವೇತನ ಲೆಕ್ಕಶೀರ್ಷಿಕೆ 2415-80-277-05-01-101 ಅಡಿಯಲ್ಲಿ ರೂ. 360.00 ಲಕ್ಷಗಳು, ಸಹಾಯಾನುದಾನ ಆಸ್ತಿಗಳ ಸೃಜನೆ ಲೆಕ್ಕ ಶೀರ್ಷಿಕೆ 2415-80-277-05-01-102 ಅಡಿಯಲ್ಲಿ 1200.00 ಲಕ್ಷಗಳು ಹಾಗೂ ಸಹಾಯಾನುದಾನ ಸಾಮಾನ್ಯ ಲೆಕ್ಕಶೀರ್ಷಿಕೆ 2415-80-277-05-01-103 ಅಡಿಯಲ್ಲಿ ರೂ.2940.00 ಲಕ್ಷಗಳನ್ನು ಹಂಚಿಕೆ ಮಾಡಲಾಗಿದೆ. ಅದರಂತೆ ಮೇಲೆ (1)ರಲ್ಲಿ ಓದಲಾದ ದಿನಾಂಕ:14-05-2014ರ ಆದೇಶದಲ್ಲಿ ಯೋಜನೆ ವೆಚ್ಚಕ್ಕಾಗಿ ಮೇಲ್ಕಂಡ ಮೂರೂ ಲೆಕ್ಕಶೀರ್ಷಿಕೆಗಳಡಿ ಒಟ್ಟಾರೆ ರೂ.1125.00 ಲಕ್ಷಗಳನ್ನು 1ನೇ ತ್ರೈಮಾಸಿಕ ಅನುದಾನವಾಗಿ ಬಿಡುಗಡೆ ಮಾಡಲಾಗಿದೆ.

2. ಮೇಲೆ (2)ರಲ್ಲಿ ಓದಲಾದ ದಿನಾಂಕ:05-07-2014ರ ಪತ್ರದೊಂದಿಗೆ ಹಣಕಾಸು ನಿಯಂತ್ರಣಾಧಿಕಾರಿಗಳು, ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ.....ಇವರು.....ಮೊದಲನೇ ತ್ರೈಮಾಸಿಕ ಅನುದಾನವಾಗಿ ಬಿಡುಗಡೆ ಮಾಡಲಾದ ಮೊತ್ತಕ್ಕೆ ಅನುದಾನದ ಬಳಕೆ ಪ್ರಮಾಣ ಪತ್ರವನ್ನು ಒದಗಿಸುತ್ತಾ, 2ನೇ ತ್ರೈಮಾಸಿಕ ಯೋಜನೆ ಅನುದಾನವಾಗಿ ಸಹಾಯಾನುದಾನ-ವೇತನ ಲೆಕ್ಕಶೀರ್ಷಿಕೆ 2415-80-277-05-01-101ರಡಿಯಲ್ಲಿ ರೂ.360.00 ಲಕ್ಷಗಳಲ್ಲಿ ರೂ.90.00 ಲಕ್ಷಗಳನ್ನು, ಸಹಾಯನುದಾನ ಆಸ್ತಿಗಳ ಸೃಜನೆ ಲೆಕ್ಕ ಶೀರ್ಷಿಕೆ 2415-80-277-05-01-102 ಅಡಿಯಲ್ಲಿ ರೂ.1200.00 ಲಕ್ಷಗಳಲ್ಲಿ ರೂ.300.00 ಲಕ್ಷಗಳನ್ನು ಹಾಗೂ ಸಹಾಯನುದಾನ ಸಾಮಾನ್ಯ ಲೆಕ್ಕಶೀರ್ಷಿಕೆ 2415-80-277-05-01-103ರಡಿಯಲ್ಲಿ ರೂ.2940.00 ಲಕ್ಷಗಳಲ್ಲಿ ರೂ.735.00 ಲಕ್ಷಗಳಂತೆ ಒಟ್ಟು ರೂ 1125.00 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

3. ಸರ್ಕಾರವು ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರಿ ಆದೇಶ ಸಂಖ್ಯೆ ಕೃಇ 09 ಕೃವಿಶಿ 2014, ಬೆಂಗಳೂರು, ದಿನಾಂಕ: 22-08-2014

4. ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳ ಹಿನ್ನೆಲೆಯಲ್ಲಿ 2014-15ನೇ ಸಾಲಿಗೆ ಶಿವಮೊಗ್ಗ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಕ್ಕೆ ಯೋಜನೆಯ ಸಹಾಯಾನುದಾನ-ವೇತನ ಲೆಕ್ಕಶೀರ್ಷಿಕೆ 2415-80-277-05-01-101ರಡಿಯಲ್ಲಿ ರೂ. 360.00 ಲಕ್ಷಗಳಲ್ಲಿ ರೂ.90.00 ಲಕ್ಷಗಳನ್ನು, ಸಹಾಯಾನುದಾನ ಆಸ್ತಿಗಳ ಸೃಜನೆ ಲೆಕ್ಕ ಶೀರ್ಷಿಕೆ 2415-80-277-05-01-102 ರಡಿಯಲ್ಲಿ ರೂ.1200.00 ಲಕ್ಷಗಳಲ್ಲಿ, ರೂ.300.00 ಲಕ್ಷಗಳನ್ನು ಹಾಗೂ ಸಹಾಯಾನುದಾನ ಸಾಮಾನ್ಯ ಲೆಕ್ಕಶೀರ್ಷಿಕೆ 2415-80-277-05-01-103ರಡಿಯಲ್ಲಿ ರೂ.2940.00 ಲಕ್ಷಗಳಲ್ಲಿ ರೂ.735.00 ಲಕ್ಷಗಳಂತೆ ಒಟ್ಟು ರೂ.1125.00 ಲಕ್ಷಗಳನ್ನು (ಒಂದು ಸಾವಿರದ ಒಂದು ನೂರ

ಇಪ್ಪತ್ತೈದು ಲಕ್ಷ ರೂಪಾಯಿಗಳು ಮಾತ್ರ) 2ನೇ ತ್ರೈಮಾಸಿಕ ಯೋಜನೆ ಅನುದಾನವಾಗಿ ಈ ಕೆಳಕಂಡ ಷರತ್ತಿಗೊಳಪಟ್ಟು ಬಿಡುಗಡೆ ಮಾಡಲಾಗಿದೆ:

1. ಪ್ರತಿ ತಿಂಗಳ ಅನುದಾನವನ್ನು ಆಯಾ ತಿಂಗಳ 20ನೇ ತಾರೀಕಿನಂದು ಅಥವಾ 20ನೇ ತಾರೀಕಿನ ನಂತರ ಹಿಂದಿನ ತಿಂಗಳ ಬಳಕೆ ಪ್ರಮಾಣ ಪತ್ರವನ್ನು ಒದಗಿಸಿ ಬಿಲ್ಲಿಗೆ ಮೇಲು ರುಜು ಪಡೆಯತಕ್ಕದ್ದು;
2. ಸರ್ಕಾರವು ಯಾವ ಉದ್ದೇಶಕ್ಕಾಗಿ ಅನುದಾನ ಬಿಡುಗಡೆ ಮಾಡುವುದೋ ಅದೇ ಉದ್ದೇಶಕ್ಕಾಗಿ ಅನುದಾನವನ್ನು ಉಪಯೋಗಿಸತಕ್ಕದ್ದು;
3. ಬಿಡುಗಡೆಯಾದ ಯೋಜನಾನುದಾನದ ಸಂಶೋದನಾ ಪೈಕಿ ಶೇ. 50ರಷ್ಟು ಹಣವನ್ನು ಸಂಶೋದನೆ ಮತ್ತು ಅಭಿವೃದ್ಧಿ ಉದ್ದೇಶಗಳಿಗೆ ವಿನಿಯೋಗಿಸತಕ್ಕದ್ದು.
4. ಸರ್ಕಾರವು ನೀಡಿದ- ಸೂಚನೆ, ಆದೇಶಗಳನುಸಾರ ಕೃಷಿ ವಿಶ್ವವಿದ್ಯಾಲಯದವರು ಯೋಜನೆಯ ವೆಚ್ಚದಲ್ಲಿ ಕಟ್ಟುನಿಟ್ಟಾಗಿ ಮಿತವ್ಯಯವನ್ನು ಪಾಲಿಸತಕ್ಕದ್ದು;
5. ಬಿಡುಗಡೆಯಾಗಿರುವ ಅನುದಾನದ ಬಗ್ಗೆ ಸೂಕ್ತ ಸಮಯದಲ್ಲಿ ಮಹಾಲೇಖಪಾಲರ ಲೆಕ್ಕಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳತಕ್ಕದ್ದು;
6. ಬಿಡುಗಡೆ ಮಾಡಲಾಗಿರುವ ಅನುದಾನವನ್ನು ಆರ್ಥಿಕ ಪರಿಸ್ಥಿತಿಯನ್ನು ಅನುಸರಿಸಿ ಆರ್ಥಿಕ ಇಲಾಖೆಯು ನೀಡಬಹುದಾದ ಸೂಚನೆಗಳಿಗೆ ಒಳಪಟ್ಟಿರುತ್ತದೆ;
7. ಆಯಾ ತಿಂಗಳಿಗೆ ಪ್ರತ್ಯೇಕ ಬಿಲ್ಲನ್ನು ಒದಗಿಸುವುದು.

5. ಬಿಡುಗಡೆಯಾಗಿರುವ ಅನುದಾನಕ್ಕೆ ಹಣಕಾಸು ನಿಯಂತ್ರಣಾಧಿಕಾರಿಗಳು, ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ, ಇವರು ಸಲ್ಲಿಸುವ ಬಿಲ್ಲಿಗೆ ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಶಿವಮೊಗ್ಗ, ಇವರು ಮೇಲು ರುಜು ಮಾಡತಕ್ಕದ್ದು.

6. ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 3 ಟಿಎಫ್‌ಪಿ 2014, ದಿನಾಂಕ 04-04-2014ರಲ್ಲಿ ಆಡಳಿತಾತ್ಮಕ ಇಲಾಖಾ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಲಾದ ಆರ್ಥಿಕ ಅಧಿಕಾರದ ಅನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

ಹೊರಡಿಸಿದೆ
ದಿನಾಂಕ: 27/8/14

(ಎಸ್.ಆರ್. ಬಸವರಾಜಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ.
(ಸೇವೆಗಳು ಮತ್ತು ಸೇವೆಗಳು)

ಇವರಿಗೆ:-

1. ಮಹಾಲೇಖಪಾಲರು, ಕರ್ನಾಟಕ, (ಲೆಕ್ಕಪತ್ರ/ತನಿಖೆ) ಬೆಂಗಳೂರು.
2. ಕುಲಪತಿಗಳು, ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ.
3. ಕೃಷಿ ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
4. ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಶಿವಮೊಗ್ಗ.
5. ಉಪ ನಿರ್ದೇಶಕರು, ನೆಟ್‌ವರ್ಕ್ ಮೆನೇಜ್‌ಮೆಂಟ್ ಸೆಂಟರ್, ಖನಿಜ ಭವನ, ಬೆಂಗಳೂರು.
6. ಜಿಲ್ಲಾ ಖಜಾನಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ.
7. ಹಣಕಾಸು ನಿಯಂತ್ರಣಾಧಿಕಾರಿಗಳು, ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ.
8. ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬೆಂಗಳೂರು.
9. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4 & 5), ವಿಧಾನ ಸೌಧ, ಬೆಂಗಳೂರು.
10. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು/ಇಲಾಖಾ ಅಂತರ್ಜಾಲ ತಾಣ